# ದೊಡ್ಡಗಟ್ಟಿಗನಬ್ಬೆ ಗ್ರಾಮ ಪಂಚಾಯತಿ ಕಾರ್ಯಾಲಯ

ಕಸಬಾ ಹೋಬಳಿ,ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕ್ರ.ಸಂ.ದೊ.ಗ್ರಾ.ಪಂ/19/2022-23 ದಿನಾಂಕ:20/05/2022

ವಿಷಯ:- ನೀರಿನ ನಿರಾಪೇಕ್ಷಣಾ ಪತ್ರ ನೀಡುವುದರ ಬಗ್ಗೆ.

ಉಲ್ಲೇಖ:- ಗೌರಮ್ಮ, ನಾರಾಯಣಸ್ವಾಮಿ ಮತ್ತು ಸಿ ನಾಗೇಶ್ ಬಿನ್ ಲೇಟ್ ಚಿಕ್ಕಪ್ಪಯ್ಯ, ಪೆತ್ತನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕುರವರ ಅರ್ಜಿ ದಿನಾಂಕ:- 20/05/2022.

******

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಹೊಸಕೋಟೆ ತಾಲ್ಲೂಕು ಕಸಬಾ ಹೋಬಳಿ ದೊಡ್ಡಗಟ್ಟಿಗನಬ್ಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೆತ್ತನಹಳ್ಳಿ ಗ್ರಾಮದ ಸರ್ವೆ ನಂ 101/2 ರಲ್ಲಿ 0-28 ಗುಂಟೆ ಮತ್ತು ಸರ್ವೆ ನಂ 101/9 ರಲ್ಲಿ 0-10 ಗುಂಟೆ, ಸರ್ವೆ ನಂ 100/1 ರಲ್ಲಿ 0-28.5 ಗುಂಟೆ , ಸರ್ವೆ ನಂ 100/2 ರಲ್ಲಿ 0-28, ಸರ್ವೆ ನಂ 100/3 ರಲ್ಲಿ 0-28.5 ಗುಂಟೆ ಒಟ್ಟು 3 ಎಕರೆ 03 ಗುಂಟೆ ಜಮೀನಿಗೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ/ವಿನ್ಯಾಸ ಅನುಮೋದನೆ ಮಾಡಿಸಿಕೊಂಡ ಈ ಸ್ವತ್ತಿಗೆ ಕುಡಿಯುವ ನೀರು ಸಂಪರ್ಕ ಒದಗಿಸಲು ಗ್ರಾಮ ಪಂಚಾಯಿತಿಯಿಂದ ದೃಢೀಕರಣ ಕೇಳಿರುವುದು ಸರಿಯಷ್ಟೇ.

ಅದರಂತೆ ಈ ಮೇಲ್ಕಂಡ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಪತ್ರದಂತೆ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಿ ಪಂಚಾಯಿತಿಗೆ ನೀಡಬೇಕಾಗಿರುವ ತೆರಿಗೆಯನ್ನು ನೀಡಿದ ಮೇಲೆ ನೀವು ಮಾಡುವ ವಸತಿ ಬಡಾವಣೆಗೆ ಕುಡಿಯುವ ನೀರಿನ ಸಂಪರ್ಕ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿಯಿಂದ ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ಮುಂದಿನ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ವಂದನೆಗಳೊಂದಿಗೆ

ತಮ್ಮ ನಂಬುಗೆಯ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ದೊಡ್ಡಗಟ್ಟಿಗನಬ್ಬೆ ಗ್ರಾಮ ಪಂಚಾಯಿತಿ
ಹೊಸಕೋಟೆ ತಾಲ್ಲೂಕು

ರವರಿಗೆ,
ಸದಸ್ಯ ಕಾರ್ಯದರ್ಶಿಗಳು,
ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ.